## ಕರಟದಿಂದ ಕಲಾಕೃತಿ



ತೆಂಗಿನ ಮರವನ್ನು ಕಲ್ಪವೃಕ್ಷವೆಂದು ಕರೆಯುತ್ತಾರೆ. ಈ ಮರದ ಪ್ರತಿ ಭಾಗವೂ ಒಂದಲ್ಲ ಒಂದು ಪ್ರಯೋಜನಕ್ಕೆ ಬರುತ್ತದೆ. ತೆಂಗಿನ ಕಾಯಿಯನ್ನು ಒಡೆದು ತಿರುಳನ್ನು ತೆಗೆದ ಬಳಿಕ ಕರಟವನ್ನು ಸಾಮಾನ್ಯವಾಗಿ ತ್ಯಾಜ್ಯವೆಂದು ಬಿಸಾಡಲಾಗುತ್ತದೆ. ತೆಂಗಿನ ಚಿಪ್ಪನ್ನು (ಕರಟ) ಮನ ಸೆಳೆಯುವ ಕಲಾಕೃತಿಯನ್ನಾಗಿ ಮಾಡುವ ಸಾಧ್ಯತೆ ಇರುತ್ತದೆ. ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಕ್ಲಿನಿಕ್ ಮುಚ್ಚಿದ್ದ ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಡಾ. ಸಿ.ಆರ್. ರಮೇಶ್ ಬಿಡುವಿನ ವೇಳೆಯಲ್ಲಿ ಕರಟದಿಂದ ಹತ್ತಾರು ಆಕರ್ಷಕ ಕಲಾಕೃತಿಗಳನ್ನು ತಯಾರಿಸಿದ್ದಾರೆ. ಲ್ಯಾಂಪ್‌ಶೇಡ್ ಮೊದಲಾದವುಗಳಲ್ಲಿ ಕಲಾವಿದನ ಕಲ್ಪನೆ, ಕೈಚಳಕವನ್ನು ಕಾಣಬಹುದಾಗಿದೆ.

—ಎಸ್.ಎನ್. ಅಶೋಕ್‌ಕುಮಾರ್ ಶ್ರವಣಬೆಳಗೊಳ




## ಸ್ಮಾರಕಕ್ಕೆ ಅಗೌರವ

ಕರ್ನಾಟಕ ರತ್ನ, ನಾಡೋಜ ಮುಂತಾದ ಅಭಿದಾನಗಳಿಗೆ ಪಾತ್ರರಾದ ಅಪರೂಪದ ರಾಜಕಾರಣಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ಸ್ಮಾರಕಕ್ಕೆ ಅಗೌರವ ಸೂಚಿಸಲಾಗುತ್ತಿದೆ. ಚಿತ್ರದುರ್ಗದ ಜಿಲ್ಲಾಧಿಕಾರಿ ನಿವಾಸದ ಪಕ್ಕದಲ್ಲಿ ಅವರ ಮನೆ ಇತ್ತು. ಆ ಮನೆಯನ್ನೇ ವಸ್ತುಸಂಗ್ರಹಾಲಯ, ವಾಚನಾಲಯ ಮಾಡಿದ್ದರು. ಆರಂಭದ ಕೆಲವು ದಿನ ಇದು ಸಾರ್ವಜನಿಕರಿಗೆ ಮುಕ್ತವಾಗಿ ತೆರೆದಿತ್ತಾದರೂ ನಂತರದ ದಿನಗಳಲ್ಲಿ ಕಾರಣಾಂತರಗಳಿಂದ ಮುಚ್ಚಿದ ಬಾಗಿಲು ತೆರೆಯಲಿಲ್ಲ. ಇದು ನಾವು ಸಾಧಕರನ್ನು ಎಷ್ಟರಮಟ್ಟಿಗೆ ಗೌರವಿಸುತ್ತೇವೆ ಎನ್ನುವುದಕ್ಕೆ ಪುಟ್ಟ ನಿದರ್ಶನ ಅಷ್ಟೆ!

—ಚನ್ನಬಸವ ಪುತ್ತೂರು, ಚಿತ್ರದುರ್ಗ

## ಮ್ಯೂಸಿಯಂ ಸೇರಿದ ಬೀಸು ಕಲ್ಲು

ಆಧುನಿಕ ಜೀವನದ ಭರಾಟೆಯಲ್ಲಿ ಹಲವಾರು ಮನೆ ಬಳಕೆಯ ವಸ್ತುಗಳು, ಸಲಕರಣೆಗಳು ಮೂಲೆ ಸೇರಿವೆ. ಅವುಗಳಲ್ಲಿ 'ಬೀಸೋ ಕಲ್ಲು' ಒಂದು. ಮೊದಲು ಆಹಾರ ಧಾನ್ಯಗಳನ್ನು ನುಚ್ಚು, ಹಿಟ್ಟು, ಬೇಳೆ ಮಾಡಲು ಬೀಸೋ ಕಲ್ಲನ್ನು ಉಪಯೋಗಿಸುತ್ತಿದ್ದರು.

'ಕುಟ್ಟೋದು ಖುಷಿ ಬಹಳ ಬೀಸೋದು ಬಿಗಿ ಬಹಳ ರೊಟ್ಟಿ ಸುಡೋದು ಝಳ ಬಹಳ' ಎಂದು ಪಡಸಾಲೆಯ ಮೇಲೆ ಕುಳಿತು ಹಾಡುತ್ತಿದ್ದರೆ ಬೀಸೋ ಕಲ್ಲು ಕೂಡ ತನ್ನದೇ ಭಾಷೆಯಲ್ಲಿ ಸಂಗೀತದ ಸಪ್ತ ಸ್ವರಗಳನ್ನು ಗರ.... ಗರಯೆಂದು ಹೊರಡಿಸುತ್ತಿತ್ತು. ಇಂದಿನ ಪೀಳಿಗೆಗೆ ವಸ್ತು ಸಂಗ್ರಹಾಲಯದಲ್ಲಿಟ್ಟು ಪರಿಚಯಿಸುವಂತ ದಿನಗಳು ಹತ್ತಿರವಾಗಿವೆ.

—ಮೈಲಾರಪ್ಪ ಬೂದಿಹಾಳ ಮುಗಿಲ ಹಕ್ಕಿ

